ಹಾಗೂ ಮಹಿಳೆಯರಿಗೆ ಈ ಹೈನು ದನಗಳನ್ನು ಕೊಡಿಸುವ ಎಲ್ಲಾ ವ್ಯವಸ್ಥೆ ಮಾಡಿ ಅವುಗಳನ್ನು ಲಾಭದಾಯಕವಾಗಿ ಬರುವ ಹಾಗೆ ಮಾಡುತ್ತಿದ್ದೇನೆ. ಅದರೂ ಕೂಡ ಮಹಿಳೆಯರು ಮುಂದೆ ಬಂದು ಸ್ವಂತ ಶಕ್ತಿಯಿಂದ ಮಾಡಬೇಕಾಗುತ್ತದೆ.

ತೋಟಗಾರಿಕೆ ಇಲಾಖೆಯ ದಿನಗೂಲಿ ನೌಕರರಿಗೆ ಜೀವನ ನಿರ್ವಹಣಾ ಭತ್ಯೆ.

47(435) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳಿಗೆ ಜೀವನ ನಿರ್ವಹಣಾ ಭತ್ಯೆಯನ್ನು ನೀಡದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಇತರೆ ಇಲಾಖೆಗಳ ದಿನಗೂಲಿ ನೌಕರುಗಳಿಗೆ ಜೀವನ ನಿರ್ವಹಣಾ ಭತ್ಯೆ ನೀಡುತ್ತಿದ್ದರೂ ತೋಟಗಾರಿಕೆ ಇಲಾಖೆಯ ನೌಕರರುಗಳಿಗೆ ಜೀವನ ನಿರ್ವಹಣಾ ಭತ್ಯೆ ನೀಡದಿರಲು ಕಾರಣವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಹೌದು.

ಆ) ದಿನಾಂಕ: 28-3-94ರ ಅಧಿಸೂಚನೆ ಸಂಖ್ಯೆ ಸಕಾ 8, ಎಲ್‌ಎಂಡಬ್ಲ್ಯೂ 90ರ ಪ್ರಕಾರ ಜೀವನ ನಿರ್ವಹಣಾ ಭತ್ಯೆಯನ್ನು ನೀಡಲು ಅವಕಾಶ ಇರುವುದಿಲ್ಲ. ಆದ್ದರಿಂದ ತೋಟಗಾರಿಕೆ ಇಲಾಖೆಯಲ್ಲಿ ನೀಡಲಾಗುತ್ತಿದ್ದ ಜೀವನ ನಿರ್ವಹಣಾ ಭತ್ಯೆಯನ್ನು ದಿನಾಂಕ: 1-4-98 ರಿಂದ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಈಗಿರುವ ಕನಿಷ್ಠ ದಿನಗೂಲಿಯಾದ ದಿನಕ್ಕೆ 25-00 ರೂ.ಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ನೇಮಕಮಾಡಿಕೊಳ್ಳಲಾಗಿತ್ತು. ಈ ಮಧ್ಯದಲ್ಲಿ ಜೀವನ ನಿರ್ವಹಣಾ ವೆಚ್ಚವನ್ನು ಅವರಿಗೆ ಕೊಡುತ್ತಿದ್ದರು. ಆದರೆ ದಿನಾಂಕ: 1-4-98 ರಿಂದ ಅದನ್ನು ನಿಲ್ಲಿಸಿದ್ದೀರಿ. ಅವರಿಗೆ ಕೊಡುತ್ತಿರುವಂತಹ ದಿನಗೂಲಿ 26 ರೂಪಾಯಿ ತೆಗೆದುಕೊಂಡು ಒಬ್ಬ ದಿನಗೂಲಿ ನೌಕರ ಜೀವನ ನಿರ್ವಹಣೆ ಮಾಡುವುದಕ್ಕಾಗುತ್ತದೆಯೇ ಎಂದು ಕೇಳುತ್ತಿದ್ದೇನೆ. ಅವನು ಒಬ್ಬನಿಗೆ ಅದು ಸಾಲುವುದಿಲ್ಲ. ಅವನ ಮನೆಯಲ್ಲಿ ಹೆಂಡತಿ, ಮಕ್ಕಳು ಏನು ಮಾಡಬೇಕು? ಆ ಬಗ್ಗೆ ಸ್ಪಷ್ಟವಾದಂತಹ ಭರವಸೆ ಕೊಡಬೇಕು.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಕಾನೂನುಗಳು ಇವೆ. ಕನಿಷ್ಟ ಕೂಲಿ ಯಾರ್ಯಾರಿಗೆ ಯಾವ್ಯಾವ ಕೆಲಸಕ್ಕೆ ಎಷ್ಟೆಷ್ಟು ಕೊಡಬೇಕೆಂದು ಕಾನೂನು ಇದೆ. ಆ ಕಾನೂನು ಪ್ರಕಾರ ಏನು ಕೊಡಬೇಕು ಅಷ್ಟು ಕೊಡುತ್ತಿದ್ದೇವೆ. ಮನೆ ಮಕ್ಕಳು ಎಲ್ಲರಿಗೂ ಕೂಡ ಮನೆಯಲ್ಲಿ 50 ಜನ ಸಂಸಾರದಲ್ಲಿ ಇದ್ದರೆ ಆ 50 ಜನರಿಗೆ ಜೀವನ ನಿರ್ವಹಣೆ ಆಗುವಂತೆ ಕೊಡಬೇಕೆಂದು ಕಾನೂನಿನಲ್ಲಿ ನನಗೆ ತಿಳಿದ ಹಾಗೆ ಇಲ್ಲ. ಕಾನೂನಿನಲ್ಲಿ ಏನು ಕೊಡುವುದಕ್ಕೆ ಸಾಧ್ಯವಿದೆ ಅದನ್ನು ಕೊಡುತ್ತಿದ್ದೇವೆ.

ಶ್ರೀ ಸಿ.ಎಂ. ಲಿಂಗಪ್ಪ :— ಸರ್ಕಾರಿ ನೌಕರರಿಗೆ ಮಾತ್ರ ಮನೆಮಂದಿ ವೆಚ್ಚವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನೀವು ವೇತನವನ್ನು ಕೊಡುತ್ತಿದ್ದೀರಿ. ಆದರೆ ಅವರೊಬ್ಬರಿಗೆ ಮಾತ್ರ ಕೊಡುತ್ತಿದ್ದೀರಾ ನೀವು?

ಶ್ರೀ ಸಿ. ಬೈರೇಗೌಡ :— ಅದಕ್ಕೂ ಕೂಡ ಕಾನೂನು ಇದೆ. ಯಾರಿಗೆ ಏನೇ ವೇತನ ಕೊಡಬೇಕಾದರೂ ಕೂಡ ಅದಕ್ಕೆ ಒಂದು ಕಾನೂನು ಇದೆ. ಆ ಕಾನೂನಿನ ಪ್ರಕಾರ ಸರ್ಕಾರಿ ನೌಕರರಿಗೆ ಕೊಡುವುದು. ಕಾನೂನು ಇಟ್ಟುಕೊಂಡೇ ಮಾಡುತ್ತೇವೆ.

ಶ್ರೀ ಸಿ.ಎಂ. ಲಿಂಗಪ್ಪ :— ಕಾನೂನು ಮಾಡತಕ್ಕಂಥವರು ಸರ್ಕಾರ. ನೀವು ಈ ರೀತಿ ಹೇಳಿದರೆ ಬಡವರ ಗತಿ ಏನಾಗಬೇಕು? ಇತರೆ ಇಲಾಖೆಯಲ್ಲಿ ಜೀವನ ನಿರ್ವಹಣೆ ಭತ್ಯವನ್ನು ಕೂಡ ಕೊಡುತ್ತಿದ್ದಾರೆ. ಅದು ತಮ್ಮ ಗಮನಕ್ಕೆ ಹೋಗಲಿ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ದಯವಿಟ್ಟು ತಾವು ಭರವಸೆ ಕೊಡಿ.

ಶ್ರೀ ಸಿ. ಬೈರೇಗೌಡ :— ಈ ರೀತಿ ಭರವಸೆ ಕೊಡುವುದಕ್ಕಾಗುವುದಿಲ್ಲ. ಅದು ಬಹಳ ಮೇಲಿನ ಹಂತದಲ್ಲಿ ಪರಿಶೀಲನೆ ಮಾಡಿ ತೀರ್ಮಾನ ಮಾಡಿದ್ದಾರೆ. ಅವರಿಗೆ ಕಾನೂನಿನ ಪ್ರಕಾರ ಏನು ಕೊಡಿಸಬೇಕಾಗಿತ್ತು, ಅದನ್ನು ಖಂಡಿತವಾಗಿ ಒಂದು ನಯಾ ಪೈಸೆ ಕಡಿಮೆ ಇಲ್ಲದೆ ಇರುವ ರೀತಿಯಲ್ಲಿ ಕೊಡುವುದಕ್ಕೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿನ ಎ.ಪಿ.ಎಂ.ಸಿ.ಯಲ್ಲಿರುವ ಹಣ.

48(652) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ಅನೇಕ ಎ.ಪಿ.ಎ.ಸಿಂ.ಗಳಲ್ಲಿದ್ದ ಹೆಚ್ಚುವರಿ ಹಣದಲ್ಲಿ ಎಪಿಎಂ.ಸಿ.ಗಳು ಇರುವ ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;